೧೮	ಬಡಗಕೆಜಕಾರು	—	೨೦೦೦	—
೧೯	ಹೊಕ್ಕಳೂರು	೩೫೦	—	—
೨೦	ಕೆರಿಂಗಾಲ	೫೦	—	—
೨೧	ಸಜಿಪ ಮುನ್ನೂರ ಗ್ರಾಮ	೧೫೦	—	—
೨೨	ಕರ್ಪೆ	—	—	೧೫೦೦೦
೨೩	ಸಂಗೆಪಟ್ಟು	—	—	೧೫೦೦೦
೨೪	ಕಾಕ್ಕವಾಡಿ	—	—	೧೨೦೦
೨೫	ತಂಕಬೆಲ್ಲೂರು	—	—	೭೦೦೦
೨೬	ರಸ್ತೆಬರಿ ಮೂವತ್ತಮೂರು ರಸ್ತೆ	೪೫೩೦	೩೦೦೦	೬೩೦
೨೭	ನಾವೂರು	—	೧೦೦೦	—
೨೮	ಸರಪಾರ್	—	೩೦೦	—
೨೯	ಮೆಣನಾಲ್ಕೂರು	—	೫೦೦	೪೨೦೦
೩೦	ಹುಳಿ	—	೫೦೦	೯೨೦೦
೩೧	ಕಾಪಲಬೆಟ್ಟು	—	೧೦೦೦	—
೩೨	ಮೂಡಪಡತೊಡು	—	೫೦೦	೭೧೫
೩೩	ಬೆಲೆತುಬೆಟ್ಟು	—	೫೦೦	೪೫೨೫
೩೪	ಇರವತ್ತೂರು	—	೨೫೦	೧೭೩೦
೩೫	ಚನ್ನಯ್ಯಕೋಟ	—	೫೦೦	೨೪೦೦
೩೬	ಸಂಗ್‌ಬಟ್ಟು	—	೨೫೦೦	—
೩೭	ಕುಕ್ಕಪಾಡಿ	—	೧೫೦೦	೩೫೦
೩೮	ಹುಲ್ಮಸ್ಡಿಗೋಳ	—	೨೦೦	—
೩೯	ಲಯನ್ಸ್‌ಕ್ಲಬ್ ಬಂಟ್ವಾಳ	—	—	೧೧೫೦೦
೪೦	ನಿಸ್ಸಾನಚೆರ್ಕ್	—	—	೪೯೪೦
		೭೩೮೨೦	೪೪೪೭೩	೧೭೮೧೫೯

ದಕ್ಷಿಣ ಕನ್ನಡ ಜಿಲ್ಲೆ, ಬಂಟ್ವಾಳ ತಾಲ್ಲೂಕಿನ ಮಣಿ–ಉಳ್ಳಾಲ ರಸ್ತೆ ಅಭಿವೃದ್ಧಿ ವಿಚಾರ.

೨೦೨. ಶ್ರೀ ಬಿ. ಎ. ಉಮರಬ್ಬ (ವಿಟ್ಲ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ

ಅ) ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ಮಣಿ–ಉಳ್ಳಾಲ ರಸ್ತೆ ಎರಡು ಪ್ರಮುಖ ಹೆದ್ದಾರಿಗಳನ್ನು ಜೋಡಿಸುವ ಹಲವಾರು ಗ್ರಾಮಗಳನ್ನು ಹಾದು ಹೋಗುವ ಅತಿ ಅವಶ್ಯಕ ರಸ್ತೆ ಯಾಗಿದ್ದು, ಇದು ಬಹಳ ಸಮಯದಿಂದ ದುರಸ್ತಿಯಾಗದೆ ತೀರ್ವ ದುರವಸ್ಥೆಯಲ್ಲಿದ್ದರೂ ಈ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದಿರಲು ಕಾರಣವೇನು,

ಆ) ಇನ್ನಾದರೂ ಸರಕಾರದವರು ದುರಸ್ತಿಗೊಳಿಸಲು ಕ್ರಮ ಕೈಗೊಳ್ಳುವರೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಈ ರಸ್ತೆಯು ೧೬.೨೦ ಕಿ. ಮೀ. ಉದ್ದವಿದ್ದು ಹಳ್ಳಿ ರಸ್ತೆಯ ಶ್ರೇಣಿಗೆ ಸೇರಿದೆ. ಇದರ ಅಭಿವೃದ್ಧಿಗೆ ಸುಮಾರು ೧೦ ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಆದ್ದರಿಂದ ಈ ರಸ್ತೆಯನ್ನು ಒಮ್ಮೆಲೆ ಅಭಿವೃದ್ಧಿ ಪಡಿಸಲು ಸಾಧ್ಯವಾಗಿಲ್ಲ

ಆ) ವಿಶೇಷ ದುರಸ್ತಿಯ ಅನುದಾನದಲ್ಲಿ ತಕ್ಷಣ ಅಗತ್ಯವಾದ ದುರಸ್ತಿಗಳನ್ನು ಹಣಕಾಸಿನ ಲಭ್ಯತೆಗನುಗುಣವಾಗಿ ಮಾಡಲಾಗುವುದು.